**ಕಥೆ**



**ಎಸ್. ದಿವಾಕರ್**

ಕಲೆ: ವಿಶ್ವನಾಥ್ ಎ.ಎಸ್.

# ಸಂಜೆ

**...ಶಿವಶಂಕರ** ಆ ಬೀದಿಯಲ್ಲಿ ಆ ಕಡೆಯಿಂದ ಈ ಕಡೆಗೆ ನಡೆದಾಡುತ್ತ ಆಗಾಗ ಆ ಮನೆಯ ಬಾಗಿಲೇನಾದರೂ ತೆರೆದಿದೆಯೇ ಎಂದು ಆಸೆಯಿಂದ ನೋಡುತ್ತಿದ್ದ. ಮಳೆ ನಿಂತು ಬಿಸಿಲೂ ಸುರಿಯುತ್ತಿದ್ದುದರಿಂದ ಆ ಮನೆಯ ಮಧ್ಯದ ಮೆಟ್ಟಿಲಿನ ಗಾರೆ ಚೆನ್ನಾಗಿ ಒಣಗಿ ಮೇಲಿನ ಮತ್ತು ಕೆಳಗಿನ ಕಾವಿಬಣ್ಣದ ಮೆಟ್ಟಿಲುಗಳ ನಡುವೆ ಎದ್ದು ಕಾಣುತ್ತಿತ್ತು.

ಅವತ್ತು ಭಾನುವಾರವಾಗಿರಬೇಕು. ಬೆಳಗ್ಗೆ ಹನ್ನೊಂದಾದರೂ ಬೀದಿಗಳೆಲ್ಲ ಎತ್ತಂಗಡಿಯಾದ ಸಂತೆಯಂತೆ ಬಿಕೋ ಎನ್ನುತ್ತಿದ್ದವು. ಶಿವಶಂಕರನಿಗೆ ಒಂದೇ ಒಂದು ನರಪಿಳ್ಳೆಯೂ ಕಾಣಿಸಲಿಲ್ಲ. ಗಿಡಮರ, ಕಾಲುದಾರಿ, ಗೋಡೆ, ಮೆಟ್ಟಿಲು, ಚರಂಡಿ ಎಲ್ಲವೂ ಅವನನ್ನೇ ದಿಟ್ಟಿಸಿ ನೋಡುತ್ತಿರುವಂತೆ; ರಸ್ತೆಗಳು ಅವನನ್ನೇ ಹಿಂಬಾಲಿಸುತ್ತಿರುವಂತೆ. ಒಂದು ಕಡೆ ಸ್ವಲ್ಪ ಹೊತ್ತು ಸುಮ್ಮನೆ ನಿಂತುಬಿಟ್ಟ. ಬಿಸಿಲು ಕೆಂಡಕಾರುವ ಆ ಹೊತ್ತಿನಲ್ಲಿ ಕಣ್ಣು ಕಂಡದ್ದನ್ನು ಮನಸ್ಸು ತಕ್ಷಣ ಗ್ರಹಿಸಲಿಲ್ಲ. ಬಿಸಿಲೋ ಗಾಳಿಯೋ ಏನನ್ನೋ ಬದಲಾಯಿಸಿದ್ದುದರಿಂದ ಅವನಿಗೆ ತಾನೆಲ್ಲಿದ್ದೇನೆ ಎಂದು ಕೂಡ ಗೊತ್ತಾಗದ ಸ್ಥಿತಿ. ಮತ್ತೆ ರಸ್ತೆಗಳೋ, ಕೊನೆಗೊಳ್ಳುತ್ತಲೇ ಇಲ್ಲ. ಆಶ್ಚರ್ಯವೆಂದರೆ ಬೆಳಗ್ಗೆ ಸಂಜೆ ಅಷ್ಟೆಲ್ಲ ಜನ ಓಡಾಡುತ್ತಿದ್ದ ಬೀದಿಗಳು ಇದ್ದಕ್ಕಿದ್ದಂತೆ ಖಾಲಿ ಖಾಲಿಯಾಗುತ್ತಿದ್ದದ್ದು. ಸಾಲುಮರಗಳಿರುವ ಹೆದ್ದಾರಿಗಳಲ್ಲೋ ಹಸಿರು ಚಿಮ್ಮುವ ಪಾರ್ಕುಗಳಲ್ಲೋ ನಡೆದಾಡುವ ಬದಲು ಊರಿನ ಚೌಕಗಳಲ್ಲೋ ಅಗಲ ರಸ್ತೆಗಳಲ್ಲೋ ತಿರುಗುವುದೇ ಇಷ್ಟವಾಗುತ್ತಿತ್ತು ಅವನಿಗೆ. ಅಲ್ಲೆಲ್ಲ ಬಂಗಲೆಗಳು, ದೊಡ್ಡ ದೊಡ್ಡ ಮನೆಗಳು ಅವನಿಗಾಗಿಯೇ ಕಾದು ಕುಳಿತಿರುವಂತೆ ಕಾಣಿಸುತ್ತಿದ್ದವು.

ಏಳೆಂಟು ತಿಂಗಳ ಹಿಂದೆ ಭುವನಗಿರಿಯಿಂದ ಕೆಲಸ ಹುಡುಕಿಕೊಂಡು ಬಂದ ಶಿವಶಂಕರನಿಗೆ ಒಂದು ಕೆಲಸ ಕೊಟ್ಟವನು ಮುನಿಯಪ್ಪ. ಅವನು ಗಾರೆ ಕೆಲಸದ ಜೊತೆ ಮರಗೆಲಸವನ್ನೂ ಮಾಡುತ್ತಿದ್ದ. ಗಲ್ಲಿಯೊಂದರಲ್ಲಿ ಎರಡು ಹುಣಸೇಮರಗಳ ನಡುವೆ ಇದ್ದ ಸಣ್ಣದೊಂದು ಶೆಡ್ಡಿನ ಮಣ್ಣಿನ ನೆಲದಲ್ಲಿ ಒಂದು ಕಡೆ ಇಟ್ಟಿಗೆ, ಜಲ್ಲಿಕಲ್ಲು, ಸಿಮೆಂಟು, ಮರಳು, ಸನಿಕೆ, ಕರಣೆ, ಇಂಚುಪಟ್ಟಿ, ತೂಗುಗುಂಡು, ಗೋಣಿಚೀಲ, ಬಾಂಡ್ಲಿ ರಾಶಿ ಬಿದ್ದಿದ್ದವು. ಇನ್ನೊಂದು ಕಡೆ ಒಂದೆರಡು ದಿಮ್ಮಿ, ಗೋಡೆಗೆ ಒರಗಿಸಿಟ್ಟ ತೊಲೆ, ರಿಪೀಸು, ಬಾಗಿಲುವಾಡ, ಕಿಟಕಿ, ಬಾಗಿಲು, ಉಳಿ, ಸುತ್ತಿಗೆ, ಗರಗಸ, ತೋಪಡ, ಇಂಚುಪಟ್ಟಿ,